ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012

ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033

---

ಸಂಖ್ಯೆ:DPUE-ACA/4/2022-ACADEMIC-DEPARTMENT OF PRE UNIVERSITY EDUCATION

ದಿನಾಂಕ: 31-05-2023

**ಸುತ್ತೋಲೆ**

ವಿಷಯ:- ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ವಿವರವನ್ನು SATS ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡುವ ಕುರಿತು.

ಉಲ್ಲೇಖ:- 1) 2023-24 ನೇ ಸಾಲಿನ ದಾಖಲಾತಿ ಮಾರ್ಗಸೂಚಿ ಕುರಿತು ನಡೆದ ಸಭೆ ದಿನಾಂಕ: 23/05/2023

2) ದಿನಾಂಕ:- 26/05/2023 ರಂದು ನಿರ್ದೇಶಕರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸೂಚಿಸಿದಂತೆ.

*****

2023-24ನೇ ಶೈಕ್ಷಣಿಕ ಸಾಲಿನ ದಾಖಲಾತಿ ಪ್ರಕ್ರಿಯೆಗಳು ದಿನಾಂಕ:-22-05-2023 ರಿಂದ ಪ್ರಾರಂಭಗೊಂಡಿರುತ್ತದೆ. ಈ ಹಿನ್ನಲೆಯಲ್ಲಿ ಪಿಯುಸಿ ತರಗತಿಗಳಿಗೆ ದಾಖಲಾಗುವ ವಿದ್ಯಾರ್ಥಿಗಳ ಮಾಹಿತಿಯನ್ನು ದಾಖಲಾತಿ ದಿನದಂದೆ SATS ಪೋರ್ಟಲ್‌ನಲ್ಲಿ ಇಂಧೀಕರಿಸಲು ಉಲ್ಲೇಖ-2ರಲ್ಲಿ ಈಗಾಗಲೇ ನಿರ್ದೇಶನ ನೀಡಲಾಗಿದೆ. ಮುಂದುವರೆದು ಪ್ರತಿದಿನ SATS ಪೋರ್ಟಲ್‌ನಲ್ಲಿ ಇಂಧೀಕರಿಸುವ ದಾಖಲಾತಿ ಮಾಹಿತಿಗಳು ROSTER ಪದ್ಧತಿಯಂತೆ ದಾಖಲಾಗಿರುವ ಕುರಿತು ಪ್ರಾಂಶುಪಾಲರು ಖಚಿತಪಡಿಸಿಕೊಳ್ಳುವುದು. ರೋಸ್ಟರ್ ಪದ್ಧತಿಯನ್ನು ಅನುಸರಿಸುವಲ್ಲಿ ಯಾವುದಾದರು ವ್ಯತ್ಯಾಸ ಕಂಡು ಬಂದಲ್ಲಿ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

ಮುಂದುವರೆದು ಈ ಸಾಲಿನಿಂದ SATS ಪೋರ್ಟಲ್‌ನಲ್ಲಿ ROSTER ಪದ್ಧತಿಯನ್ನು ಅಳವಡಿಸುವುದಕ್ಕಾಗಿ ನಮೂನೆಯನ್ನು ನೀಡಲಾಗಿದ್ದು ಇದರಲ್ಲಿ ಇಂಧೀಕರಿಸುವ ವಿವರಣೆಗಳನ್ನು ಜಿಲ್ಲಾ ಹಂತದಲ್ಲಿ ಉಪ ನಿರ್ದೇಶಕರ ಲಾಗಿನ್ ಮೂಲಕ ಪರಿಶೀಲಿಸಲು ಅವಕಾಶವನ್ನು ನೀಡಲಾಗಿದೆ. ಆದ್ದರಿಂದ ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯ ಕಾಲೇಜುಗಳಲ್ಲಿ ROSTER ಪದ್ಧತಿಯಂತೆ ದಾಖಲಾಗಿರುವ ಬಗ್ಗೆ ಪರಿಶೀಲಿಸಿ ನಂತರ ಕ್ರೋಢಿಕರಿಸಿದ ಮೊದಲ ಹಂತದ ವರದಿಯನ್ನು (**15/06/2023** ರವರೆಗಿನ) ಕೇಂದ್ರ ಕಛೇರಿಗೆ ದಿನಾಂಕ: **16/06/2023**ರಂದು ಸಲ್ಲಿಸಲು ಸೂಚಿಸಿದೆ.

Signed by Sindhu B Rupesh
Date: 31-05-2023 16:06:25

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ
ಇಲಾಖೆ.

ಕ್ರಮಕ್ಕಾಗಿ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ - ತುರ್ತು ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ – ಜಿಲ್ಲಾ ಉಪನಿರ್ದೇಶಕರ ಮೂಲಕ.
3. ಸಹಾಯಕ ನಿರ್ದೇಶಕರು ಇ-ಆಡಳಿತ ಶಾಖೆ ಪ.ಪೂ.ಶಿ.ಇಲಾಖೆ-ಮಾಹಿತಿಗಾಗಿ
4. ಕಛೇರಿ ಪ್ರತಿ.